International Journal of Kannada Research 2018; 4(3): 65-67




International Journal of Kannada Research
www.kannadajournal.com

**ISSN: 2454–5813**
IJKR 2018; 4(3): 65-67
© 2018 IJKR
www.kannadajournal.com
Received: 13-05-2018
Accepted: 14-06-2018

**Yallappa Ajit Jakkannavar**
Teaching Assistant (Kannada)
Sangolli Rayanna Constitute
College Rani Channamma
University Belgaum
Karnataka, India

**Correspondence**
**Yallappa Ajit Jakkannavar**
Teaching Assistant (Kannada)
Sangolli Rayanna Constitute
College Rani Channamma
University Belgaum
Karnataka, India

# ಗಿರೀಶ ಕಾರ್ನಾಡರ 'ಅಗ್ನಿ ಮತ್ತು ಮಳೆ' ನಾಟಕದ ವಸ್ತು ವಿನ್ಯಾಸ

**Yallappa Ajit Jakkannavar**

ಗಿರೀಶ ಕಾರ್ನಾಡರ ಅಗ್ನಿ ಮತ್ತು ಮಳೆ ನಾಟಕವು ಮಹಾಭಾರತದ ವನ ಪರ್ವದಲ್ಲಿ ಬರುವ ಯಮಕ್ರೀತನ ಉಪಖ್ಯಾನವನ್ನು ಆಧರಿಸಿ ರಚಿಸಲಾಗಿದೆ. ಇದು ೧೯೯೪ ರಲ್ಲಿ ಪ್ರಕಟವಾಯಿತು. ಕಾರ್ನಾಡರೇ ಹೇಳಿದಂತೆ ೧೯೯೩ ರಲ್ಲಿ ಅಮೇರಿಕಾದ ಮಿನಿಯಾ ಪೋಲಿಸ್ ನಗರದ ಗ್ರಥ್ರಿ ಥೀಏಟರ್ ನಾಟಕ ಸಂಸ್ಥೆಯವರು ಅವರ ರಂಗಭೂಮಿಗಾಗಿ ಒಂದು ನಾಟಕ ಬರೆಯಲು ತಿಳಿಸಿದಾಗ ತಾವು ವಿದ್ಯಾರ್ಥಿಯಾಗಿದ್ದಾಗ ಓದಿದ ಮಹಾಭಾರತದ ಕಥೆ ಸುಮಾರು ೩೭ ವರ್ಷಗಳಿಂದ ಇದರ ಕುರಿತು ನಾಟಕ ರಚಿಸುವ ಆಲೋಚನೆ ಅದು ೧೯೯೩ ರಲ್ಲಿ ಫಲಕಾರಿಯಾಯಿತು. ನಾಟಕಕಾರರು ಈ ನಾಟಕವನ್ನು ಭಾರತೀಯ ಪೌರಾಣಿಕ ಹಿನ್ನೆಲೆಯಲ್ಲಿ ಮತ್ತು ಭಾರತೀಯ ಪ್ರೇಕ್ಷಕರನ್ನು ಗಮನದಲ್ಲಿಟ್ಟುಕೊಂಡು ಕನ್ನಡದಲ್ಲಿ ಮೊದಲು ರಚಿಸಿ ನಂತರ ಭಾಷಾಂತರಿಸಿ ಅಮೇರಿಕನ್ನರಿಗೆ ಒಪ್ಪಿಸಿದರು ಎಂಬ ವಿಚಾರವನ್ನು ತಮ್ಮ ಅಗ್ನಿ ಮತ್ತು ಮಳೆ ನಾಟಕದ ಕೃತಜ್ಞತೆಗಳು ಭಾಗದಲ್ಲಿ ಈ ನಾಟಕದ ಹಿನ್ನೆಲೆಯನ್ನು ತಿಳಿಸಿದ್ದಾರೆ. ಈ ನಾಟಕದ ಶೀರ್ಷಿಕೆಯಲ್ಲೇ ಒಂದು ವಿಶಿಷ್ಟ ಔಚಿತ್ಯದಿಂದ ಕೂಡಿದೆ ಅಗ್ನಿ ಮತ್ತು ಮಳೆ ಇವೆರಡು ಒಂದಕೊಂದು ವಿರುದ್ಧವೂ, ಪೂರಕವೂ ಆಗಿವೆ. ಅಗ್ನಿ ಮತ್ತು ಮಳೆ ಇವೆರಡು ಭಾರತೀಯ ಪುರಾಣದ ಹಿನ್ನೆಲೆಯಲ್ಲಿ ಅಗ್ನಿ ದೇವ ಮತ್ತು ವರುಣ (ಇಂದ್ರ) ದೇವರ ಕೃಪೆಯಿಂದ ಭೂಮಿಗೆ ಇವೆರಡು ದೊರೆಯುತ್ತದೆ. ವೈಜ್ಞಾನಿಕ ಹಿನ್ನೆಲೆಯಲ್ಲಿ ನೋಡಿದಾಗ ಸೂರ್ಯ (ಅಗ್ನಿ)ನ ಕಿರಣಗಳಿಂದ ಸಮುದ್ರದ ನೀರು ಆವಿಯಾಗಿ ಮೇಲಕ್ಕೆ ಹೋಗಿ ಮೋಡಕಟ್ಟಿ ಘನೀಕರಣ ಹೊಂದಿ ಭೂಮಿಗೆ ಮಳೆಯಾಗಿ ಭೂಮಿಯ ಮೇಲಿನ ಚರಾಚರ ಮಣ್ಣಿನಲ್ಲಿ ವಸ್ತುಗಳನ್ನು ತಣಿಸಿ ಬಿಂಜಾಕುರಗೊಂಡು ಹೊಸ ಜೀವ ಅಸ್ತಿತ್ವ ಪಡೆಯುತ್ತವೆ. ಇವೆರಡರ ಕೊರತೆಯಿಂದಲೂ ಅತಿಯಾದ ಬಿಸಿಲಿನಿಂದ ಬರಗಾಲ ಅತಿಯಾದ ಮಳೆಯಿಂದ ಅತಿವೃಷ್ಟಿಯಿಂದಲೂ ಜೀವಹಾನಿ (ಅನಾವೃಷ್ಟಿ) ಆಸ್ತಿಪಾಸ್ತಿಯ ಹಾನಿಗಳು ಸಂಭವಿಸುತ್ತವೆ. ಈ ಹಿನ್ನೇಲೆಯಲ್ಲೇ ಇವೆರಡೂ ಮಾನವನ ಚಟುವಟಿಕೆಗಳ ಮೇಲೆ ಎಂತಹ ಪರಿಣಾಮ ಬೀರಬಲ್ಲವು ಎಂಬುದನ್ನು ಕುಟುಂಬ ದ್ವೇಷ, ಜನಾಂಗ ವೈವಿಧ್ಯ, ಧಾರ್ಮಿಕ ಆಚರಣೆ ಇವೆಲ್ಲವನ್ನು ಮೀರಿದ ಮಳೆಯನ್ನು ಬಹುಕೇಂದ್ರಿಯ ನೆಲೆಯಲ್ಲಿ ನಾಟಕವನ್ನು ರಚಿಸಲಾಗಿದೆ.

ಹತ್ತು ವರ್ಷಗಳಿಂದ ನಾಡಿನಲ್ಲಿ ಮಳೆಯಾಗದ ಕಾರಣ ಮಳೆ ರಾಯನಾದ ಇಂದ್ರನನ್ನು ಬರಿಸಲು ಏಳು ವರ್ಷಗಳಿಂದ ಪರ್ಜನ್ಯ ಯಜ್ಞ ನಡೆದಿದೆ. ಈ ಯಜ್ಞನ ಅಧ್ವರ್ಯನಾಗಿದ್ದ ಪರಾವಸು ಮತ್ತು ಅರವಸು ಇವರಿಬ್ಬರ ಮನೋಧೋರಣೆಗಳು ಭೀನ್ನವಾಗಿವೆ. ಪರಾವಸು ಯಜ್ಞದ ಮೂಲಕ ವರುಣದೇವನನ್ನು ಒಲಿಸಲು ಪ್ರಯತ್ನಿಸಿದರೆ ಅರವಸು ಜಾತಿಗಾರನಾಗಿ ಬೇಡರ ಕನ್ಯೆ ನಿತ್ತಿಲೆಯನ್ನು ಬೆನ್ನತ್ತಿ ಹೋದ ಇತನು ಚಕ್ಷು (ರಂಗ) ಯಜ್ಞದ ಮೂಲಕ ವರುಣದೇವನ ಒಲಿಸುವ ಪ್ರಯತ್ನದಲ್ಲಿದ್ದ. ೧೦ ವರ್ಷಗಳ ವಿಪರೀತ ಬರಗಾಲದಿಂದ ಜನ ಗುಳೆ ಹೊರಟಿದ್ದಾರೆ. ಗೊಲ್ಲರು ತಮ್ಮ ದನಗಳನ್ನು ಮಾರಿ ನೀರು ಕೊಂಡು ತೆಗೆದುಕೊಳ್ಳುತ್ತಿದ್ದಾರೆ. ಬರದ ಛಾಯ ಎಲ್ಲೆಲ್ಲೂ ಆವರಿಸಿದೆ. ಎಲ್ಲರ ಬಾಯಲ್ಲೂ ಮಳೆಯು ವಿಚಾರ ಈ ಮಳೆಯನ್ನು ಪಡೆಯಲು ಪರಾವಸು ಮೊದಲಾದವರು ಸಾಮೂಹಿಕವಾಗಿ ಪ್ರಯತ್ನಿಸಿದರೆ ಯಮಕ್ರೀತ ರೈಭ್ಯ ನಂತವರು ಇಂದ್ರನನ್ನು ಕುರಿತು ವೈಯಕ್ತಿಕವಾಗಿ ಘನ ಘೋರ ತಪಸ್ಸನ್ನು ಮಾಡಿ ಇಂದ್ರನನು ಒಲಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಹೀಗೆ ಈ ನಾಟಕದಲ್ಲಿ ಎಲ್ಲಾ ಕ್ರಿಯೆಗಳಿಗೂ ಮೂಲ ಮಳೆಯಾಗಿದೆ. ಮಳೆಗಾಗಿ ಯಜ್ಞ ಅಧ್ವರ್ಯನಾದ ಪರಾವಸುನ ಪತಿ ವಿಶಾಖೆ ತನ್ನ ಹಳೆಯ ಪ್ರೇಮಿ ಯಮಕ್ರೀತ ೧೦ ವರ್ಷ ತಪ್ಪಸ್ಸು ಮಾಡಿ ಶಿವನನ್ನು ಒಲಿಸಿಕೊಂಡ ಒಂದು ಮಹಾನ್ ಸಾಧಕನೆಂದು ಎಲ್ಲರು ಬಣ್ಣಿಸುತ್ತಿದ್ದಾರೆ. ಆದರೆ ಆತನಿಗೆ ತನ್ನ ಹಳೆಯ ಸ್ನೇಹಿತ ವಿಶಾಖಾಳನ್ನು ಕೂಡಲು ಅವಕಾಶ ದೊರತದ್ದು ಹಳ್ಳದ

ದಂಡೆಯಲ್ಲಿ ವರ್ತಿ ತೋಡಿ ನೀರು ತರುವ ಸಂದರ್ಭದಲ್ಲಿ, ಆಕೆ ಏಕಾಂಗಿಯಾಗಿ ಸಿಗಲು ಮುಖ್ಯ ಕಾರಣ ಮಳೆಯಾಗದಿರುವದೆ ಆಗಿದೆ. ಯಮಕ್ರೀತ ತನ್ನ ದಾಯಾದಿಗಳಾದ ರೈಭ್ಯ ಹಾಗೂ ಅವನ ಮಕ್ಕಳ ಮೇಲಿನ ಸೇಡು ತೀರಿಸಿಕೊಳ್ಳಲು ವಿಶಾಖಾಳೊಂದಿಂಗೆ ಸಂಬಂಧ ಹೊಂದಿದ ಕಾರಣ (ಮಹಾಭಾರತ ಕಥೆಯಂತೆ ಇಲ್ಲಿಯೂ ದಾಯಾದಿ ಕಲಹದಲ್ಲಿ ಹೆಣ್ಣನ್ನು ದಾಳವಾಗಿ ಬಳಸಿದ್ದನ್ನು ಕಾಣಬಹುದು) ರೈಭ್ಯ ತನ್ನ ದಾಯಾದಿಯ ಮಗನಾದ ಯಮಕ್ರೀತ ಸಂಹಾರಕ್ಕಾಗಿ ಬ್ರಹ್ಮರಾಕ್ಷಸನನ್ನು ಸೃಷ್ಟಿಸಿದ. ಈ ಬ್ರಹ್ಮರಾಕ್ಷಸ ಯಮಕ್ರೀತನನ್ನು ಕೊಲ್ಲಲು ಬಂದಾಗ ವಿಶಾಖಾ ಆತನ ಕಮಂಡಲದಲ್ಲಿನ ನೀರನ್ನು ಚಲುತ್ತಾಳೆ ಅದಕ್ಕೆ ದಾಯಾದಿ ಕಲಹದ ಕಾರಣದಿಂದ ತನ್ನನ್ನು ಬಳಸಿದ್ದು ಆಗ ಯಮಕ್ರೀತನು ಬ್ರಹ್ಮ ರಾಕ್ಷಸನಿಂದ ಪ್ರಾಣ ಉಳಿಸಿಕೊಳ್ಳಲು ಪ್ರೋಕ್ಷಾರ್ಥಕ್ಕೆ (ತೀರ್ಥ) ಒಂದು ಹನಿ ನೀರು ಸಾಕಾಗಿತ್ತು. ಆದರೆ ಒಂದು ಹನಿ ನೀರು ಇಲ್ಲದೆ ಬ್ರಹ್ಮ ರಾಕ್ಷನಿಂದ ಹತನಾಗಲು ಮಳೆಯೇ ಮುಖ್ಯಕಾರಣವಾಯಿತು.

ಕಾರ್ನಾಡರು ಈ ನಾಟಕದಲ್ಲಿ ಸ್ತ್ರೀ ಪಾತ್ರಗಳಾದ ನಿತ್ತೆಲೆ ಮತ್ತು ವಿಶಾಖಾಳ ಪಾತ್ರವನ್ನು ವಿಶಿಷ್ಟವಾಗಿ ರೂಪಿಸಿದ್ದಾರೆ. ನಿತ್ತೆಲೆ ಇಲ್ಲಿ ಬೇಡ ಕನ್ಯೆಯಾದರೂ ಆಕೆಯ ವಿಚಾರ ತರ್ಕಗಳು ವಿಶೇಷವಾಗಿ ಸಾಂಸ್ಕೃತಿಕ ಹಿನ್ನೆಲೆಯನ್ನು ಪ್ರಶ್ನಿಸುವಂತಿವೆ ಸಂಸ್ಕೃತಿ ಮತ್ತು ಉಪಸಂಸ್ಕೃತಿಯ ಮೌಲ್ಯಗಳನ್ನು ಬರೆಗೆ ಹಚ್ಚುವ ರೀತಿಯಲ್ಲಿ ತನ್ನ ವಿಚಾರ ಧಾರೆಗಳನ್ನು ಅಭಿವ್ಯಕ್ತಿಸಿದ್ದಾರೆ. "ಅಲ್ಲ ಕುರುಡಜ್ಜ ಇವರೆಲ್ಲ ಹೀಗೆ ನೋಡು ದೇವರನ್ನು ಮಾತನಾಡಿಸಬೇಕು ಅಂದರೆ ಕಾಡಿನೊಳಗೆ ಹೊಕ್ಕು ತಪ್ಪಸ್ಸು ಮಾಡಬೇಕು ಇಲ್ಲದಿದ್ದರೆ ಬೇರೆ ಯಾರು ಬರದೆ ಇರೋ ಹಾಗೆ ಸುತ್ತ ಬೇಲಿ ಕಟ್ಟಿ ಒಳಗೆ ಯಜ್ಞ ಉರಿಸಬೇಕು ಅದು ವರ್ಷಾನುಗಟ್ಟಲೆ! ಅಷ್ಟಾದ ಮೇಲೂ ಕೂಡ ದೇವರು ಮೆಚ್ಚಿದರೆ ಮೆಚ್ಚಿದ ಇಲ್ಲದಿದ್ದರೆ ಇಲ್ಲ ಎಷ್ಟು ಒಯ್ಯಾರ ಆ ದೇವರದೂ ನಮ್ಮೆಲ್ಲ ಹಾಗಿಲ್ಲಪ್ಪ ........... (ಪುಟ ೧೩) ಯಮಕ್ರೀತನಿಗೆ ಇಂದ್ರ ಪುತ್ರಕ್ಷನಾದಾಗ ಒಂದ ಸೆಳರ ಮಳೆಯನ್ನಾದರು ಸುರಿಸು ಎಂದು ಕೇಳಬಾರದೇ ಎಂದು ಕುರುಡಜ್ಜನನ್ನು ಕೇಳುವ ರೀತಿ ಬ್ರಾಹ್ಮಣರು ಯಜ್ಞ ಯಾಗಾದಿ ಕಠಿಣ ತಪ್ಪಸ್ಸುಗಳನ್ನು ಆಚರಿಸುವ ರೀತಿಯನ್ನು ಕಂಡು ನಿತ್ತೆಲೆ ಸಂಸ್ಕೃತಿಗೆ ಪ್ರತಿಸಂಸ್ಕೃತಿಯಾಗಿ ಬಂದೇ ಕಾಡಿನಲ್ಲಿ ಕುಟೀರಗಳನ್ನು ರಚಿಸಿಕೊಂಡು ಬದುಕುವ ಬ್ರಾಹ್ಮಣರು ಮತ್ತು ಅದೇ ಕಾಡಿನಲ್ಲಿ ವಾಸವಾದ ಬೇಡ ಜನ ಅಥವಾ ಆದಿವಾಸಿಗಳ ವಿಶಿಷ್ಠ ಆಚರಣೆ, ನಂಬಿಕೆ, ಸಂಪ್ರದಾಯಗಳನ್ನು ಸಂದರ್ಭಾನುಸಾರ ಸ್ವಾಭಾವಿಕವಾಗಿ ಅವುಗಳನ್ನು ಮುಖಾಮುಖಿಗೊಳಿಸುವ ಕಾರ್ಯನಡೆದಿದೆ. "ನಮ್ಮೆಲ್ಲ ಹಾಗಿಲ್ಲಪ್ಪ ಇಂಥಿಂಥ ಅಮವಾಸ್ಯೆಗೆ ಉತ್ಸವ ಅಂತ ಮಂತ್ರವಾದಿ ಮೊದಲೇ ಸಾರಿ ಬಿಡತಾನೆ. ಅವತ್ತೇ ಎಲ್ಲರ ಕಣ್ಣೆದುರಿಗೆ ದೈವ ಅವನ ಮೈಮೇಲೆ ಬಂದು ನಾವು ಕೇಳಿದ ಎಲ್ಲರ ಪ್ರಶ್ನೆಗೆಲ್ಲ ಸಮಾಧಾನ ಹೇಳತದೆ. ತೊಡಕು ತೊಂದರೆಗಳನ್ನು ನೀಗಿಸತದೆ. ಮುಚ್ಚುಮರೆ ಇಲ್ಲ" (ಪುಟ ೧೩) ಹೀಗೆ ಭಿನ್ನ ಸಂಸ್ಕೃತಿಗಳನ್ನು ಬಿಂಬಿಸುತ್ತ ಕಾಡುಜನರನ್ನು ಮೌಢ್ಯರು ಎಂದು ಕರೆಯುವದು ಸಾಮಾನ್ಯವಾದರು ನಾಡಿನ ಜನ ಸುಸಂಸ್ಕೃತರಾದರು ಇವರು ಆಚರಿಸುವ ವಿಧಿ ವಿಧಾನಗಳಲ್ಲಿನ ಮೌಲ್ಯಗಳ ಸತ್ಯಾಸತ್ಯತೆಯನ್ನು ಅರಿಯುವ ವಿಚಾರ ನಿತ್ತಿಲೆಯ ಈ ಮೇಲಿನ ಮಾತಿನಿಂದ ತಿಳಿಯ ಬಹುದಾಗಿದೆ. "ಅಗ್ನಿ ಮತ್ತು ಮಳೆ'ಯಲ್ಲಿ ನಿತ್ತಿಲೆ ಪ್ರತಿನಿಧಿಸುವ ಸಂಸ್ಕೃತಿಗೆ ಪ್ರತಿಸಂಸ್ಕೃತಿಯಾಗಿ ಬರುತ್ತದೆ. ಕಾರ್ನಾಡರು ಈ ಪ್ರತಿಸಂಸ್ಕೃತಿಯನ್ನು ವೈಭವಿಕರಿಸುವದಿಲ್ಲವಾದರೂ ಅದರಲ್ಲಿ ಬಲವಾದ ಮಾನವೀಯ ಮೌಲ್ಯವನ್ನು ಕಾಣುತ್ತಾರೆ. ನಿಷಾದರ ನೈತಿಕತೆ, ಆಚಾರಗಳು, ನಂಬಿಕೆಗಳು, ಪದ್ಧತಿಗಳು ಇವುಗಳಲ್ಲಿ ಯಾವ ಕವಡುಗಂಟಿಕತನವಿಲ್ಲ ನಿತ್ತಿಲೆಯನ್ನು ಅವರ ಅನಾಮಿಕತನವನ್ನು ಸೂಚಿಸುವಂತೆ ಸಮುದಾಯ ನಿಷ್ಠೆಯನ್ನು ಸೂಚಿಸುತ್ತದೆ" (ಸಾತ್ವಿಕ ಪಥ ಜಿ.ಎಸ್. ಅಮೂರ ಪುಟ ೮೮)

ಅಗ್ನಿ ಮತ್ತು ಮಳೆ ನಾಟಕದಲ್ಲಿ ಕಂಡು ಬರುವ ಇನ್ನೊಂದು ಪ್ರಮುಖ ಅಂಶ ಅಣ್ಣ-ತಮ್ಮ ತಂದೆ-ಮಗ, ಗಂಡ – ಹೆಂಡತಿ ಮೊದಲಾದ ಮಾನವೀಯ ಸಂಬಂಧಗಳ ಅಂಧಃಪತನದ ವಿಚಾರಗಳು ಇಲ್ಲಿ ಹೆಚ್ಚು ಚರ್ಚಿತವಾಗಿದೆ.

ಯಮಕ್ರೀತ-ನಿತ್ತೆಲೆ, ನಿತ್ತೆಲೆ- ಅವಳ ಅಣ್ಣ, ಅರವಸು-ಪರಾವಸು, ವಿಶಾಖಾ-ಪರಾವಸು ಹೀಗೆ ಹಲವು ಮಾನವೀಯ ಸಂದರ್ಭಗಳಲ್ಲೂ ಒಳ ತಿಕ್ಕಾಟಗಳನ್ನು ಇಲ್ಲಿ ಕಾಣಬಹುದು. ಹಳೆಯ ದ್ವೇಷ- ವೈಷಮ್ಯ, ಯಮಕ್ರೀತ- ರೈಭ್ಯ ಹಾಗೂ ಇವರ ಮಕ್ಕಳ ಹಳೆಯ ಪ್ರೇಮ ವಿಶಾಖಾ- ಪರಾವಸುವಿನಿಂದಲೇ ತಮ್ಮ ತಂದೆಯ ಕೊಲೆ, ರೈಭ್ಯನಿಂದಲೇ ತಮ್ಮ ತಮ್ಮನ ಮಗನನ್ನು ಬ್ರಹ್ಮರಾಕ್ಷಸನಿಂದ ಕೊಲೆ ಮಾಡುವಂತಹದು, ಯಮಕ್ರೀತ ತನ್ನ ಹಳೆ ಪ್ರೇಮಸಿಯ ಪ್ರೇಮವನ್ನು ದಾಯಾದಿ ಕಲಹದ ದಾಳವಾಗಿ ಬಳಸಿದನು, ಪರಾವಸು ತನ್ನ ತಂದೆಯ ಕೊಲೆಯನ್ನು ತಮ್ಮ ಅರವಸುನ ತಲೆಗೆ ಕಟ್ಟಿ ಅವನ ಮೇಲೆ ಹಲ್ಲೆ ಮಾಡಿಸಿದನು. ವಿಶಾಖಾ ತನ್ನ ಪ್ರಿಯಕರನನ್ನು ರಕ್ಷಿಸಲು ಸಲಹೆ ನೀಡಲು ಬಂದು ಆತನ ಕಮಂಡಲದಲ್ಲಿನ ನೀರನ್ನು ಚಲ್ಲಿ ವಿಶ್ವಾಸಘಾತ ಮಾಡುತ್ತಾಳೆ. ಕುರುಡಜ್ಜ ಕಾಲು ಹೆಜ್ಜೆಯ ಸದ್ದಿನಿಂದಲೇ ವ್ಯಕ್ತಿಯನ್ನು ಗುರುತಿಸಬಲ್ಲವನಾಗಿದ್ದರೂ ಬ್ರಹ್ಮರಾಕ್ಷಸ ಯಮಕ್ರೀತನನ್ನು ಬೆನ್ನಟ್ಟಿ ಬಂದಾಗ ಅವನನ್ನು ಗುರುತಿಸಲಾಗದೆ ತಡೆದು ಅವನ ಕೊಲೆಗೆ ಪರೋಕ್ಷವಾಗಿ ಕಾರಣನಾದದ್ದು, ನಿತ್ತಲೆ ತನ್ನ ಗಂಡ ಯಜಮಾನ ಒಳ್ಳೆಯ ಸ್ವಭಾವದವನೆಂಬ ತಾನೆ ವರ್ಣಿಸಿದರು ತನ್ನ ಹಳೆಯ ಪ್ರೇಮಿಯ ದುಃಸ್ಥಿತಿ ಕಂಡು ಗಂಡನನ್ನು ಬಿಟ್ಟು ಕೊನೆಗೆ ತನ್ನ ಯಜಮಾನ ಮತ್ತು ಅಣ್ಣನಿಂದ ಕತ್ತುಕೊಯ್ದು ಕೊಲೆಗೈದರು ಅರವಸು ಪರಾವಸು ತನ್ನ ತಂದೆಯನ್ನು ಕೊಂದು ಅಮಾಯಕನಂತೆ ಯಜ್ಞ ಕಾರ್ಯದಲ್ಲಿ ತೊಡಗಿದಾಗ ಅವನು ಯಜ್ಞ ಕುಂಡದಲ್ಲಿ ಹಾಕಿದನು. ಆದರೆ ಅಪರಿಚಿತರಾದ ಜಾತಿಗಾರರರು ಹೆಳವ ಸತ್ತಾಗ ಅಂತ್ಯ ಸಂಸ್ಕಾರಕ್ಕಾಗಿ ಸ್ಮಶಾನಕ್ಕೆ ಹೋದಾಗ ಪರಾವಸುವಿನಿಂದ ಹಲ್ಲೆಗೊಳಗಾದ ಅರವಸು ಇನ್ನೂ ಜೀವಂತವಾಗಿರುವದನ್ನು ಕಂಡು ಜೀವಂತ ವ್ಯಕ್ತಿ ಸ್ಮಶಾನದಲ್ಲಿ ಇರಬಾರದು ಎಂದು ತಂದು ರಕ್ಷಣೆ ಮಾಡುತ್ತಾರೆ. ಆದರೆ ಸಂಬಂಧಿಕರಲ್ಲೇ ಪರಸ್ಪರ ದ್ವೇಷ ಅಸೂಹೆಗಳು ಎದ್ದು ಕಾಣುತ್ತೇವೆ. ಹೀಗೆ ಇವೆಲ್ಲ ರಕ್ತ ಸಂಬಂಧಗಳನ್ನು ದಾಯಾದಿಗಳನ್ನು ಅತ್ಯಂತ ವಿಶ್ವಾಸದ ಜನರೇ ಈ ರೀತಿ ಮೊಸಗೊಳಿಸುವಂತಹದು ಮಾನವೀಯ ಸಂಬಂಧಗಳು ಸಮಾಜದಲ್ಲಿ ಅಂಧಃಪತನಗೊಳ್ಳುತ್ತಿರುವದರ ಸಂಕೇತಗಳಾಗಿದೆ.

ಕಾರ್ನಾಡರ ಅಗ್ನಿ ಮತ್ತು ಮಳೆ ನಾಟಕದಲ್ಲಿ ವೈದಿಕ – ಅವೈದಿಕ ಜನರು ಕೂಡಿಸಿಕೊಂಡ ಸಂಹಿತೆ (ನಿಯಮ) ಗಳು ನಾಟಕದ ಪ್ರಮುಖ ತಿರುವುಗಳಿಗೆ ಕಾರಣವಾಗಿವೆ. ರೈಭ್ಯನ ಮಗ ಪರಾವಸು ಸತತ ಏಳು ವರ್ಷಗಳಿಂದ ನಡೆಯುತ್ತಿರುವ ಯಜ್ಞ ಕಾರ್ಯದಲ್ಲಿ ಅಧ್ವರ್ಯನಾಗಿದ್ದ ಕಾರಣ ಯಜ್ಞ ಸ್ಥಳ ಬಿಟ್ಟು ಹೊರ ಬರುವಂತಿಲ್ಲ ಕಂಕಣ ಬಂಧನದ ಕಾರಣ ಆತ ಅಲ್ಲೇ ವಾಸವಾಗಬೇಕೆಂಬ ನಿಯಮದಿಂದ ಆತನ ಸತಿ ವಿಶಾಖಾ ತನ್ನ ಹಳೆಯ ಪ್ರೇಮಿ ಯಮಕ್ರೀತನೊಂದಿಗೆ ಅನೈತಿಕ ಸಂಬಂಧವನ್ನು ಹೊಂದಿದಳು. ಈ ವಿಷಯ ತಿಳಿದ ಪರಾವಸು ಯಜ್ಞಸ್ಥಳಬಿಟ್ಟು ಕೈಯಲ್ಲಿ ಬಿಲ್ಲು ಹಿಡಿದು ಒಂದು ತನ್ನ ತಂದೆಯನ್ನೇ ಕೊಂದು ಮತ್ತೆ ಅದೇ ರಾತ್ರಿ ಯಜ್ಞ ಸ್ಥಳ ಸೇರಿಕೊಂಡನು ಇದು ಸಂಹಿತೆ ನಿಯಮಗಳನ್ನು ಮುರಿಯುವ ಹಂತಕ್ಕೆ ವ್ಯಕ್ತಿಯನ್ನು ತಂದ

ನಿಲ್ಲಿಸುತ್ತವೆ. ಇನ್ನೊಂದು ಸಂದರ್ಭವಾದ ಪರಾವಸು ಬ್ರಾಹ್ಮಣನಾದ ಕಾರಣ ಸವರ್ಣಿಯರು ಬೇಡತಿಯರನ್ನು ಇಟ್ಟುಕೊಳ್ಳಲಿಕ್ಕೆಬೇಕು. ಕಟ್ಟಿಕೊಳ್ಳಲಿಕ್ಕೆ ಬೇಡವೇ,,,,,,,? ಅಂತ ನಿತ್ತಲೆಯ ಅಪ್ಪ ಬುಡಕಟ್ಟು ಹಿರಿಯರ ಎದುರು ಪ್ರಮಾಣ ಮಾಡಬೇಕೆಂಬ ನಿಯಮ ರೂಪಿಸಿದ. ನಿಷಾದ ಕನ್ಯೆಯನ್ನು ವಿವಾಹವಾಗುವದಕ್ಕಿಂತ ಮುಂಚೆ ಪಂಚಾಯತಿಯಲ್ಲಿ ಒಂದು ಪ್ರಮಾಣ ಮಾಡಿ ನಂತರ ನಿತ್ತೆಲೆಯನ್ನು ವಿವಾಹವಾಗಬೇಕೆಂಬ ನಿಯಮ (ಸಂಹಿತೆ) ಇತ್ತು ಆದರೆ ಅರವಸು – ನಿತ್ತಿಲೆ ಪಂಚಾಯತಿಗೆ ಬರುವ ಸಂದರ್ಭದಲ್ಲಿ ನಡೆದ ವಿಶಾಖಾ ಯಮಕ್ರೀತ ಅನೈತಿಕ ಸಂಬಂಧವನ್ನು ತಿಳಿದ ರೈಭ್ಯ ಸೃಷ್ಠಿಸಿದ ಬ್ರಹ್ಮ ರಾಕ್ಷಸನಿಂದ ಹತ್ಯೆಯಾದಾಗ ಯಮಕ್ರೀತ ಶವವನ್ನು ಕಾಡು ಪ್ರಾಣಿಗಳು ಹರಿದು ತಿಂದರೆ ಬ್ರಹ್ಮ ಹತ್ಯೆಯ ಪಾಪ ತಗಲುವದೆಂದು ಅರವಸು ಯಮಕ್ರೀತನಿಗೆ ಶಸ್ತ್ರೋಕ್ತವಾಗಿ ಶವ ಸಂಸ್ಕಾರ ಮಾಡಿ ಮೈಲಿಗೆಯಲ್ಲಿ ಪಂಚಾಯತಿಗೆ ಬರಬಾರದು ಎಂಬ ನಿಯಮಕ್ಕೆ ಬದ್ದನಾಗಿ ಸ್ನಾನಕ್ಕೆ ನೀರಿಲ್ಲದೆ ಹಳ್ಳದಲ್ಲಿ ವರ್ತಿ ತೆಗೆದು ಸ್ನಾನ ಮಾಡಿ ಬರುವಷ್ಟರಲ್ಲೇ ಪಂಚಾಯತಿಗೆ ಸೇರಿದ ಜನ ಕಾದು ಸುಸ್ತಾಗಿ ಮನೆಗೆ ತೆರಳಿದ್ದರಿಂದ ಅರವಸು ನಿತ್ತಲೆಯನ್ನು ವಿವಾಹವಾಗುವ ಅವಕಾಶದಿಂದ ವಂಚಿತವಾದ ಆಗ ಬೇರೊಬ್ಬನೊಂದಿಗೆ ವಿವಾಹವಾದ ನಿತ್ತಲೆ ಅರವಸುವ ದುಸ್ಥಿತಿಯನ್ನು ಕೇಳಿ ಗಂಡನನ್ನು ತೊರೆದು ಅರವಸುನ ಆರೈಕೆಯಲ್ಲಿ ತೊಡಗಿದಳು ಹೀಗೆ ನೀತಿ ಸಂಹಿತೆ ನಿಯಮಗಳೆನೆ ಇದ್ದರೂ ಇವೆಲ್ಲ ಮಾನವ ನಿರ್ಮಿತವಾದವೂ ಮನುಷ್ಯ ಅವುಗಳನ್ನು ಮೀರುವುದು ಸಹಜ ಕಾಲಕ್ಕೆ ತಕ್ಕಂತೆ ನಿಯಮಗಳಲ್ಲೂ ಬದಲಾವಣೆ ಅವಶ್ಯ ಎಂಬ ಅಂಶವೂ ಇಲ್ಲಿ ಧ್ವನಿತವಾಗಿದೆ.

“ಅಣ್ಣಾ ಪರಾವಸು ನೀನೆ ಒಮ್ಮೆ ನನಗೆ ಹೇಳಿದ್ದೆ” ಭರತಮುನಿಯ ಪುತ್ರರು ಕೂಡ ನಾಟಕದಲ್ಲಿ ಪಾತ್ರಧರಿಸಿ ಜಾತಿ ಭ್ರಷ್ಟರಾದರೂ ಪತಿತರಾದರರು ನಿನಗೆ ನಿನ್ನ ಬ್ರಹ್ಮತ್ವದ ಹಂಗಿದ್ದರೆ ನಾಟಕ ಕುಣಿತಗಳನ್ನು ಬಿಟ್ಟು ಬಿಡು ಅಂತ ನಿನ್ನ ಮಾತು ಕೇಳಿ ಅಂದು ನಾನು ನಾಟ್ಯದ ಹಂಬಲ ಬಿಟ್ಟುಬಿಟ್ಟೆ ಆದರೆ ಈ ಹೊತ್ತು ನಾನು ಬ್ರಹ್ಮಹಂತಕ ಸ್ವತಃ ತನ್ನ ತಂದೆಯನ್ನೇ ಕೊಲೆ ಮಾಡಿದ ಪಾತಕಿ ಬಹಿಷ್ಕೃತ ಆದ್ದರಿಂದ ನಾಟಕದಲ್ಲಿ ಪಾತ್ರ ಹಾಕುವ ಯೋಗ್ಯತೆ ನನಗಿದೆ. ಈಗ ದಯಮಾಡಿ ನಿಷೇದ ಮಾಡಬೇಡ” (ಪುಟ ೪) ಎಂದು ಕೇಳಿದ ಜಾತಿ ಭ್ರಷ್ಟನಾದ ಅರವಸು ಮತ್ತು ಜಾತಿಗಾರರು ಕೀಳುಕುಲದವರಾದರು ಏಳು ವರ್ಷದಿಂದ ಯಜ್ಞಮಾಡಿದರೂ ಮಳೆ ಬಾರದ ಕಾರಣ ಚಕ್ಷುಯಜ್ಞ (ನಾಟಕ)ದಿಂದಾದರೂ ಮಳೆ ಬಂದರೇ ಸಾಕು ಎಂದು ರಾಜ ಪರಾವಸು ಸಮ್ಮತಿಸಬೇಕು ಎಂದು ಕೇಳಿದಾಗ ಪರಾವಸು “ವಿಘ್ನದ ಛಾಯೆ ಬಿದ್ದಾಗಲೇ ಯಜ್ಞ ಹೆಚ್ಚು ಅರ್ಥ ಪೂರ್ಣವಾಗತದೋ ಏನೊ” ಎಂದು ಒಪ್ಪಿಗೆ ನೀಡಿದ ಅವನ ಮಾತಿನಂತೆ ನಾಟಕ ಮುಗಿಯುವಷ್ಟರಲ್ಲೇ ಮಳೆ ಸುರಿದದ್ದು ಈ ವಿಚಾರವನ್ನು ಇನ್ನಷ್ಟು ಖಚಿತ ಪಡಿಸಿತು.

ಗಿರೀಶ ಕಾರ್ನಾಡರು ‘ಅಗ್ನಿ ಮತ್ತು ಮಳೆ’ ನಾಟಕದಲ್ಲಿ ಕಥೆಯೊಳಗೊಂದು ಕಥೆಯನ್ನು ಹೆಣೆಯುವ ತಂತ್ರ ಬಳಸಿದ್ದಾರೆ. ಪ್ರಾಚೀನ ಕನ್ನಡ ಗ್ರಂಥವಾದ ವಡ್ಡಾರಾದನೆಯ ಕಥೆಯ ತಂತ್ರ ಈ ನಾಟಕದ ಮೇಲೆ ಪ್ರಭಾವ ಕಂಡು ಬರುತ್ತದೆ. ಈ ಕಥೆಯಲ್ಲಿ (ಹಿನ್ನೋಟ) ತಂತ್ರವನ್ನು ಬಳಸಲಾಗಿದೆ. ಯಜ್ಞ ಸ್ಥಳದಿಂದ ಪ್ರಾರಂಭಗೊಂಡ ನಾಟಕ ಯಜ್ಞದ ಅಧ್ವರ್ಯನಾದ ಪರಾವಸುನ ಅನುಮತಿ ಪಡೆದು ನಾಟಕ ನೇರವಾಗಿ ಅರವಸು ಮತ್ತು ನಿತ್ತಲೆಯರ ಯಮಕ್ರೀತ ವಿಶಾಖಳ ಸಂಪರ್ಕ ರೈಭ್ಯನ ಕೊಲೆ ನಂತರ ಮತ್ತೆ ಯಜ್ಞದಲ್ಲಿ ಪಾಲ್ಗೊಂಡ ಅರವಸುವನ್ನು ಯಜ್ಞದಿಂದ ದೂರವಿಡಲು ಪ್ರಯತ್ನಿದಾಗ ರಾಜ ಅರವಸುವಿಲ್ಲದೆ ನಾಟಕವಾಡಲು ತಿಳಿಸಿದಾಗ” ಇದ್ದ ತಂಡ ಬರಗಾಲದ ಬೇಗನೆ ಕರಗಿ ಹೋಗಿದೆ ಪಾತ್ರಧಾರಿಗಳೆಲ್ಲ ಹೊರನಾಡಿಗೆ ಓಡಿ ಹೋಗಿದ್ದಾರೆ. ಆ ಹುಡುಗ ಇಲ್ಲದೆ ನಾಟಕ ಆಡುವದು ಸಾಧ್ಯವಿಲ್ಲ” ಎಂದಾಗ ಒಪ್ಪಿಗೆ ಪಡೆದು ಜಾತಿಗಾರರು ‘ಇಂದ್ರ ವಿಜಯ’ ನಾಟಕವನ್ನು ಆಡಲು ಸಿದ್ದರಾಗುತ್ತಾರೆ. ಅದರಲ್ಲಿ ಪ್ರಮುಖವಾಗಿ ಪ್ರಜಾಪತಿಯ ಮಕ್ಕಳಾದ ಇಂದ್ರ ವಿಶ್ವರೂಪ ಮತ್ತು ವೃತಾಸುರ ಇಂದ್ರ ವಿಶ್ವರೂಪ ಕೊಲ್ಲಲು ಪ್ರಯತ್ನಿಸುತ್ತಿದ್ದ ಆದರೆ ವೃತಾಸುರ ವಿಶ್ವರೂಪನಿಗೆ ಬೆಂಗಾವಲಾಗಿ ರಕ್ಷಣೆ ನೀಡುತ್ತಿದ್ದ ಒಮ್ಮೆ ವೃತಾಸುರ ಇಲ್ಲಿದಾಗ ವಿಶ್ವರೂಪವನ್ನು ಇಂದ್ರನು ಯಜ್ಞಸ್ಥಳಕ್ಕೆ ಆಹ್ವಾನಿಸಿ ಕೊಲೆಗೈದನು ಇದನ್ನು ಕಂಡ ವೃತಾಸುರ ಈ ದೃಶ್ಯವನ್ನು ದೂರದಿಂದ ವಿಕ್ಷೀಸಿ ತನ್ನ ತಂದೆಯನ್ನು ಕೊಂದ ಪರವಾಸುನನ್ನು ರಾಕ್ಷಸನ ಮುಖವಾಡ ಧರಿಸಿದ ಅರಾವಸು ತನ್ನ ಅಣ್ಣನನ್ನು ಹುಡುಕುತ್ತ ಯಜ್ಞ ಸ್ಥಳದಲ್ಲಿ ಕೊಲಾಹಲವನ್ನು ಎಬ್ಬಿಸಿದ ಆಗ ಯಜ್ಞದ ಕೊನೆಯ ದಿನ ಉಚಿತ ಊಟ ದೊರೆಯುವದೆಂದು ಕಾದು ಕುಳಿತ ಕಾಡು ಜನರು ಯಜ್ಞಸ್ಥಳ ಪ್ರವೇಶಿಸಿದರು ನಿತ್ತಲೆ ಪರಾವಸುವನ್ನು ಎಚ್ಚರಿಸಲು ಪ್ರಯತ್ನಿಸಿದಳು. ತನ್ನ ಅಣ್ಣನನ್ನು ಯಜ್ಞ ಕುಂಡದಲ್ಲಿ ಹಾಕಿ ಧ್ವಂಸ ಮಾಡಿದ ಅಷ್ಟರಲ್ಲೇ ಇಂದ್ರ ಪ್ರತ್ಯಕ್ಷನಾಗಿ ಅರಾವಸುವನ್ನು ಏನು ಬೇಕು. ವರಕೇಳು ಎಂದು ಹೇಳಿದರು ಕೂಡಲೇ ಇಂದ್ರನನ್ನು ನಂಬದೆ ಕೊನೆಗೆ ಗುರುತಿಸಿದ ಅಷ್ಠರಲ್ಲೇ ಬ್ರಹ್ಮರಾಕ್ಷಸ ನಾನು ನಿನ್ನ ತಮ್ಮ, ನಿಮ್ಮ ತಂದೆಯ ಸೃಷ್ಟಿಯಿಂದ ನಾನು ಅಂತರ ಪಿಶಾಚಿಯಾಗಿ ಬದುಕುತ್ತಿದ್ದೇನೆ. ನನಗೆ ಮೋಕ್ಷ ದೊರೆಯುವಂತ ವರ ಕೇಳು ಎಂದು ಒತ್ತಾಯಿಸಿತು. ಇತ್ತ ಜನರೆಲ್ಲ ಮಳೆಬೇಕು ಮಳೆ....... ಎಂದು ಒತ್ತಾಯಿಸಿತು. ಆಗ ಗೊಂದಲದಲ್ಲಿ ಬ್ರಹ್ಮರಾಕ್ಷಸನಿಗೆ ಮೊಕ್ಷ ಸಿಗಲೆಂದು ಕೇಳಿದ ಇತ್ತ ಜನರೆಲ್ಲ ಮಳೆಬೇಕು ಮಳೆ........ ಎಂದು ಒತ್ತಾಯಿಸುತ್ತಿದ್ದರು. ಆಗ ತನ್ನ ಪ್ರಿಯತಮೆ ನಿತ್ತಲೆ ತನ್ನ ಯಜಮಾನ ಮತ್ತು ಅಣ್ಣನಿಂದ ಹತಳಾಗಿದ್ದರಿಂದ ಆಕೆಯನ್ನು ಬದುಕಿಸಲು ಕೇಳಿಕೊಂಡ ಆಗ ಇಂದ್ರ ಕಾಲಚಕ್ರ ಹಿಂದೆ ತಿರಗಲು ಸಾಧ್ಯವಿಲ್ಲ ಒಂದು ವೇಳೆ ತಿರುಗಿದರು ಈ ಮೊದಲು ಸತ್ತವರೆಲ್ಲ ಮರುಳಿ ಜನ್ಮ ಪಡೆದವರು ಎಂದಾಗ ಪರಾವಸು ಅವರೆಲ್ಲ ಜನ್ಮ ಪಡೆದರೆ ಪಡೆಯಲ್ಲಿ ಆದರೆ ನನ್ನ ನಿತ್ತಲೆ ಜೀವಂತವಾಗಿ ಬೇಕು ಎಂದು ಕೇಳಿಕೊಂಡನು ಆಗ ಇಂದ್ರ ನಸುನಗೆ ಬಿರಿ ಮಳೆ ಬರಿಸುವ ನಿರ್ಧಾರ ಮಾಡಿದ ಜನ ಮಣ್ಣಿನ ವಾಸನೆ ಗುರುತಿಸಿ ಹರ್ಷೋದ್ಗಾರ ಹಾಕಿದರು ಆದರೆ ನಿತ್ತಲೆ ಶವವಾಗಿ ಬಿದ್ದಿದಳು ಮಳೆ ಗುಡುಗು ಸಹಿತ ಬಾರಿ ಮಳೆ ಸುರಿಯುತ್ತದೆ.

ಹೀಗೆ ನಿತ್ತಲೆಯ ದುರಂತ ಮರಣದೊಂದಿಗೆ ನಾಟಕ ಮುಕ್ತಾಯಗೊಳ್ಳುತ್ತದೆ. ಕಾರ್ನಾಡ ಪೌರಾಣಿಕ ವಸ್ತುವನ್ನು ಆಯ್ದು ಹಲವು ಹೊಸ ಆಲೋಚನೆ ತಂತ್ರಗಳನ್ನು ಬಳಸಿ ಮಹಾಭಾರತವನ್ನು ಸಮಕಾಲೀನ ಸಮಸ್ಯೆಗೆ ಅಳವಡಿಸಿಕೊಂಡು ನಾಟಕ ರಚಿಸಿದ್ದಾರೆ.

## ಪರಾಮರ್ಶಿತ ಗ್ರಂಥಗಳು


1. ಅಗ್ನಿ ಮತ್ತು ಮಳೆ – ಗಿರೀಶ ಕಾರ್ನಾಡ
2. ಗಿರೀಶ ಕಾರ್ನಾಡರ ನಾಟಕಗಳು – ಸಂ.ಕೃಷ್ಣಮೂರ್ತಿ ಚಂದರ
3. ಯುಗಧರ್ಮ ಹಾಗೂ ಸಾಹಿತ್ಯ ದರ್ಶನ – ಕೀರ್ತಿನಾಥ ಕುರ್ತಕೋಟಿ
4. ಗಿರೀಶ ಕಾರ್ನಾಡರ ಸಮಗ್ರ ನಾಟಕಗಳು – ಸ್ವಪ್ನಾ ಪ್ರಕಾಶನ
5. ಸಾತ್ವಿಕ ಪಥ – ಜಿ.ಎಸ್.ಅಮೂರ